For Private Circulation Only

ಸಂಪುಟ 4, ವಿಶೇಷ ಸಂಚಿಕೆ ಆಗಸ್ಟ್ 2011

India ECHOES ONE WORLD ONE HUMANITY

ಶ್ರೀ ರಾಮಚಂದ್ರ ಮಿಷನ್®

# ಸ್ಮರಣೀಯ ಹುಟ್ಟುಹಬ್ಬ





ಪೂಜ್ಯ ಗುರುಗಳ 85ನೇ ಹುಟ್ಟುಹಬ್ಬವನ್ನು ತಿರುಪ್ಪೂರಿನ ಡೈಮಂಡ್ ಜುಬಿಲಿ ಪಾರ್ಕ್‌ನಲ್ಲಿ ಜುಲೈ 23ರಿಂದ 25ರವರೆಗೆ ಆಚರಿಸಲಾಯಿತು. ಗುರುಗಳೊಡನೆ ಉತ್ಸವದಲ್ಲಿ ಪಾಲ್ಗೊಳ್ಳುವುದು ಆನಂದದಾಯಕ ಸಂದರ್ಭವಾಗಿದ್ದಿತು. ಗುರುಗಳು ತಿರುಪ್ಪೂರಿಗೆ ಜುಲೈ 20ರಂದು ತಲುಪಿದರು ಹಾಗೂ ಅವರ ಕಾರು ಸ್ಥಳಕ್ಕೆ ಆಗಮಿಸುತ್ತಿದ್ದಂತೆಯೇ ಅಭ್ಯಾಸಿಗಳೆಲ್ಲರೂ ತಮ್ಮ ಪ್ರೀತಿಪಾತ್ರರಾದ ಗುರುಗಳ ದರ್ಶನ ಪಡೆಯಲು ಮೌನವಾಗಿ ಕಾಯುತ್ತಿದ್ದರು, ಕೆಲವು ಯುವ ಅಭ್ಯಾಸಿಗಳು ಗುರುಗಳಿಗಾಗಿ ಸ್ವಾಗತ ಗೀತೆಯನ್ನು ಹಾಡಿದರು. ಗುರುಗಳು ಕಾರನ್ನು ನಿಲ್ಲಿಸಿ ಹಾಡನ್ನು ಆಲಿಸಿ ನಂತರ ತಮ್ಮ ಕುಟೀರಕ್ಕೆ ತೆರಳಿದರು. 'ಅವರು ತಲುಪಿದೊಡನೆಯೇ' ನಾವು ವಾತಾವರಣದಲ್ಲಿ ಬದಲಾವಣೆಯನ್ನು ಗಮನಿಸಬಹುದಿತ್ತು.

ಗುರುಗಳು ಬರುವ ಮೊದಲೇ ಉತ್ಸವದ ಸ್ಥಳದಲ್ಲಿ ಕೆಲವು ಕೊನೇ ಕ್ಷಣಗಳ ತಯಾರಿಯ ವಿನಃ ಬಹುತೇಕ ಎಲ್ಲಾ ವ್ಯವಸ್ಥೆಗಳು ಆಗಿದ್ದವು. ಗುರುಗಳ ಆಗಮನವಾಗುತ್ತಿದ್ದಂತೆಯೇ ಸ್ವಯಂಸೇವಕರ ಕೆಲಸಗಳು ಭರಾಟೆಯಿಂದ ಸಾಗಿದವು ಹಾಗೂ ಎಲ್ಲರೂ ತಮಗೆ ವಹಿಸಿದ ಕೆಲಸಗಳನ್ನು ಕೈಗೆತ್ತಿಕೊಂಡಿದ್ದರಿಂದ ವಿವಿಧ ಕಾರ್ಯಕ್ಷೇತ್ರಗಳು ಅವಿರತವಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದವು. ಗುರುಗಳು ರುಚಿ ಕೆಫೆಯವರು ನಡೆಸುವ ಕ್ಯಾಂಟೀನನ್ನು ಉದ್ಘಾಟಿಸಿದರು ಮತ್ತು ವ್ಯವಸ್ಥೆಯನ್ನು ಪರಿಶೀಲಿಸಲು ಆಶ್ರಮದ ಸುತ್ತ ಒಂದು ಸುತ್ತು ಹಾಕಿದರು.

## ಅಗಾಧ ಪ್ರಮಾಣದ ಸಿದ್ಧತೆ

200,000 ಚ.ಅಡಿ ವಿಸ್ತಾರದ ಬೃಹತ್ ಧ್ಯಾನಮಂದಿರವನ್ನು ನಿರ್ಮಿಸಲಾಗಿತ್ತು ಹಾಗೂ ಅದರಲ್ಲಿ ಸುಮಾರು 100 ಸ್ವಯಂಸೇವಕರ ಸಹಾಯದಿಂದ 1,500 ಕಿಲೋ ಪುಷ್ಪಾಲಂಕಾರವನ್ನು ಮಾಡಲಾಗಿತ್ತು. ಧ್ಯಾನಮಂದಿರದಲ್ಲಿ ವೇದಿಕೆ ಸಜ್ಜು, ನೀರು ಪೂರೈಕೆ, ಸ್ವಚ್ಛತೆ, ಅಲಂಕಾರ, ಶ್ರವಣ–ದೃಶ್ಯ ಸಹಾಯ, ಆರಕ್ಷಣೆ, ಗೋಲ್ಡನ್ ಬುಕ್ ಮುಂತಾದ ಕೆಲಸಗಳಿಗಾಗಿ ಸುಮಾರು 400 ಸ್ವಯಂಸೇವಕರು ಕಾರ್ಯನಿರ್ವಹಿಸಿದರು. ಇಂತಹ ಬೃಹತ್ ಪ್ರಮಾಣದ ಕಾರ್ಯಾಚರಣೆಯು ಅತ್ಯುತ್ತಮ ಸಾಮರಸ್ಯ ಮತ್ತು ಸಹಕಾರದೊಡನೆ ನಡೆಯಬೇಕಾದರೆ ಅದು ಪೂಜ್ಯ ಗುರುಗಳ ಕೃಪಾಭರಿತ ಮಾರ್ಗದರ್ಶನದಿಂದ ಮಾತ್ರ ಸಾಧ್ಯ. ಗುರುಗಳು ಜುಲೈ 22ರಂದು ಬೆಳಗಿನ ಸತ್ಸಂಗದೊಡನೆ ಧ್ಯಾನಮಂದಿರವನ್ನು ಉದ್ಘಾಟಿಸಿದರು ಮತ್ತು ಅವರು ಉತ್ಸವದ ಪ್ರತೀ ದಿನ ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟರು.










ಚಿತ್ರ ಪ್ರದರ್ಶನ ಸ್ಥಳವು ಅತ್ಯಾಕರ್ಷಕವಾಗಿದ್ದಿತು ಹಾಗೆಯೇ ಸಹಜಮಾರ್ಗದ ಯುವ ಅಭ್ಯಾಸಿಗಳ ಚಟುವಟಿಕೆಯ ವಿವರವನ್ನು ಪ್ರದರ್ಶಿಸಿದ ಯುವ ಜ್ಞಾನಭಂಡಾರ (ಯುಥ್ ಅವೇರ್‌ನೆಸ್ ಬೂತ್) ಸಹ. ಮಕ್ಕಳ ಕೇಂದ್ರವು ಕೂಡ ಮತ್ತೊಂದು ಆಕರ್ಷಣೆಯಾಗಿತ್ತು. ಒಂದು ವಿಶೇಷವಾದ ಭಾರೀ ಗುಡಾರದಲ್ಲಿ ಎಲ್ಲಾ ವಯೋಮಾನದ ಮಕ್ಕಳನ್ನು ಅನೇಕ ಕರಕುಶಲ ಕಲೆಗಳಿಂದ ವ್ಯಸ್ತವಾಗಿಡಲಾಗಿತ್ತು. ಇದಕ್ಕಾಗಿಯೇ ವಿಶೇಷವಾಗಿ ರಚಿಸಿ ಮುಂಬೈನಲ್ಲಿ ಧ್ವನಿಮುದ್ರಿಸಲಾದ ಗೀತೆಯೊಂದನ್ನು ಸುಮಾರು 2000 ಮಕ್ಕಳು ಉತ್ಸವದ ಕಾಲದಲ್ಲಿ ತಾಲೀಮು ನಡೆಸಿ ನಂತರ ಹಾಡಿದ್ದನ್ನು ಗುರುಗಳಿಗಾಗಿ ನೇರ ಪ್ರಸಾರ ಮಾಡಲಾಯಿತು. ಪ್ರಪಂಚದ ವಿವಿಧೆಡೆಯಿಂದ ಬಂದು ಸೇರಿದ ಮಕ್ಕಳು ಏಕಸ್ವರದಿಂದ ಹಾಡುವುದನ್ನು ಕೇಳಲು ಅದ್ಭುತವಾಗಿತ್ತು.



## ಸಂಖ್ಯೆ ಮತ್ತು ವ್ಯವಸ್ಥೆಯ ಉತ್ತುಂಗ

ಉತ್ಸವದಲ್ಲಿ ಅಭ್ಯಾಸಿಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಸ್ಥಳದಲ್ಲಿ ಮಕ್ಕಳೂ ಸೇರಿದಂತೆ ಸುಮಾರು 48,000 ಅಭ್ಯಾಸಿಗಳು ಹಾಜರಿದ್ದರು. ಇದು ಇವತ್ತಿನ ತನಕದ ಅಭ್ಯಾಸಿಗಳ ಹಾಜರಿಯಲ್ಲಿಯೇ ದಾಖಲೆಯಾಗಿದೆ. ಅಭ್ಯಾಸಿಗಳ ವಸತಿಗಾಗಿ ಮಾತ್ರವೇ ಸುಮಾರು 200 ಗುಡಾರಗಳ ನಿರ್ಮಾಣವಾಗಿತ್ತು. ಅದರ ಜೊತೆಗೆ ವಿಶೇಷ ವಸತಿಯಾದ 'ಆರಾಮ್ ಡಾರ್ಮ್' ಸೀಮಿತ ಸಂಖ್ಯೆಯಲ್ಲಿ ಕೊಂಚ ಬೆಲೆಗೆ ಲಭ್ಯವಿತ್ತು.



ಇಷ್ಟು ದೊಡ್ಡ ಪ್ರಮಾಣದ ಅಭ್ಯಾಸಿಗಳ ಕೂಟವನ್ನು ನಿರ್ವಹಿಸಲು ವಿವಿಧ ಶಾಖೆಗಳಲ್ಲಿ ಅಗತ್ಯ ಸ್ವಯಂಸೇವಕರ ಕೃಷಿಯನ್ನು ನಾವು ಊಹಿಸಬಹುದು. ಸಾರಿಗೆ, ವಸತಿ ಮತ್ತು ದಾಖಲಾತಿ ವಿಭಾಗಗಳ ಸಂಯೋಜನೆಯು ಅತ್ಯವಶ್ಯವಾಗಿತ್ತು ಏಕೆಂದರೆ ಅನೇಕ ಸ್ಥಳಗಳಿಂದ ಬಸ್‌ಗಳು ಸ್ಥಳಕ್ಕೆ ಆಗಮಿಸಿದಾಗ ಸ್ವಯಂಸೇವಕರು ಸರಳ ವಿಧಾನ ಅನುಸರಿಸಿ ಪರಿಣಾಮಕಾರಿಯಾಗಿ ಅಭ್ಯಾಸಿಗಳ ತೊಂದರೆರಹಿತ ಓಡಾಟದ ವ್ಯವಸ್ಥೆ ಮಾಡಿದರು. ಎಲ್ಲಾ ಸ್ವಯಂಸೇವಕರ ತಂಡಗಳಿಗೆ ಅವರೆಲ್ಲೇ ಕಾರ್ಯ




















ನಿರ್ವಹಿಸುತ್ತಿದ್ದರೂ ಸರಿಯಾದ ಸಮಯಕ್ಕೆ ಭೋಜನ ಮತ್ತು ನೀರನ್ನು ಒದಗಿಸಲು ವಾಹನದಲ್ಲಿ ಭೋಜನ ಪೂರೈಕೆ ತಂಡವು ಹಗಲೂ ರಾತ್ರಿ ಕಾರ್ಯನಿರತವಾಗಿತ್ತು.

ಪುಸ್ತಕಾಲಯವು ವಿಶಾಲವಾಗಿದ್ದು ಹೊಸ ಪ್ರಕಟನೆಗಳ ಸಮೇತ ಎಲ್ಲಾ ಭಾಷೆಗಳ ಪುಸ್ತಕಗಳೂ ಖರೀದಿಗೆ ಲಭ್ಯವಿದ್ದವು.

ಪಾಕಶಾಲೆಯಲ್ಲಿ ಸುಮಾರು 100 ಸ್ವಯಂಸೇವಕರು ನಿಂತು ಚಪಾತಿ ಮಾಡುವ ದೃಶ್ಯವು ಅದ್ಭುತವಾಗಿತ್ತು. ಇಲ್ಲಿ ಅಭ್ಯಾಸಿಗಳಿಗೆ ಬೆಳಗಿನ ಊಟ ಮತ್ತು ಮಧ್ಯಾಹ್ನದ ಹೈಟೀಯನ್ನು ಒದಗಿಸಲಾಯಿತು.

ಸುವ್ಯಸ್ಥಿತವಾದ ವೈದ್ಯಶಾಲೆಯು ಆಂಬುಲೆನ್ಸ್‌ಸಹಿತ ತುರ್ತು ಪರಿಸ್ಥಿತಿಗಳಿಗಾಗಿ ಸದಾ ತಯಾರಾಗಿದ್ದಿತು. ಬಹು ದೊಡ್ಡ ನೀರು ಶುದ್ಧೀಕರಣ ಘಟಕವು ಘಂಟೆಗೆ 10,000 ಲೀ. ಶುದ್ಧೀಕರಿಸಿದ ನೀರನ್ನು ಒದಗಿಸಿತು. ಸ್ವಯಂಸೇವಕರ ತಂಡವೊಂದು ಶೌಚಾಲಯಗಳು ಸ್ವಚ್ಛವಾಗಿ ಉಪಯೋಗಿಸಲು ತಯಾರಾಗಿರುವಂತೆ ನೋಡಿಕೊಂಡಿತು. ಮುಖ್ಯ ಪಾಕಶಾಲೆ ಮತ್ತು ಕ್ಯಾಂಟೀನಿನಲ್ಲಿ ತೆಗೆದುಕೊಂಡ ಮುಂಜಾಗ್ರತೆಗಳಿಂದ ಅತಿ ಕಡಿಮೆ ಜನಕ್ಕೆ ವೈದ್ಯಕೀಯ ಸಹಾಯದ ಅಗತ್ಯವಿತ್ತು.

## ನವೀನ ಶಿಸ್ತುಕ್ರಮದ ಉಪಕ್ರಮ

ಜುಲ್ಯೆ 23ರಂದು ಉತ್ಸವ ಸಮಿತಿಯ ಅಧ್ಯಕ್ಷರಾದ ಸೋ. ಹರ್ಷವರ್ಧನ್ ಗುಪ್ತಾರವರು ಮುಂಜಾನೆಯ ಸತ್ಸಂಗದ ನಂತರ ಸ್ವಾಗತ ಭಾಷಣ ನೀಡಿದರು. ಉತ್ಸವ ನಡೆಸಲು ತಿರುಪ್ಪೂರನ್ನು ಆರಿಸಿದ್ದಕ್ಕಾಗಿ ಅವರು ಗುರುಗಳಿಗೆ ವಂದನೆ ಮತ್ತು ಕೃತಜ್ಞತೆ ಅರ್ಪಿಸಿದರು. ಸಿದ್ಧತಾ ಕಾರ್ಯಗಳಲ್ಲಿ ಸಹಾಯ ಹಸ್ತ ನೀಡಿದ ದೇಶದ ವಿವಿಧೆಡೆಯ ಸ್ವಯಂಸೇವಕರಿಗೆ ಅವರು ಧನ್ಯವಾದ ಸಲ್ಲಿಸಿದರು. ಅವರು ಗುರುಗಳು ಸತ್ಸಂಗದಲ್ಲಿ ಪ್ರಾಣಾಹುತಿಯ ರೂಪದಲ್ಲಿ ನಮ್ಮ ಮೇಲೆ ಕೃಪೆಯನ್ನು ಸುರಿಸಿದ ನಂತರ ಅವರಿಗೆ ನಾವು ಕುಟೀರದಲ್ಲಿ ತೊಂದರೆ ನೀಡಬಾರದೆಂದು ಕೇಳಿಕೊಂಡರು.











ಗುರುಗಳು ಈ ಭಂಡಾರಕ್ಕಾಗಿ ನೀಡಿದ ವಿಷಯ–'ಪ್ರೇಮದಲ್ಲಿ ಶಿಸ್ತು'ನಿಂದ ಪ್ರೇರಿತರಾಗಿ ಗುರುಗಳ ವಿಶ್ರಾಂತಿಯ ಅಗತ್ಯವನ್ನು ಗೌರವಿಸಿ ಮಾನಸಿಕ ಒತ್ತಡದಿಂದ ಅವರನ್ನು ದೂರವಿಡಲು ಸಹಕರಿಸುವಂತೆ ಎಲ್ಲಾ ಅಭ್ಯಾಸಿಗಳಿಗೂ ನಿವೇದಿಸಿಕೊಳ್ಳಲಾಗಿತ್ತು. ಅಭ್ಯಾಸಿಗಳು ಅದ್ಭುತವಾಗಿ ಸ್ಪಂದಿಸಿದ್ದರಿಂದ ಗುರುಗಳು ತಮ್ಮ ಕಾರ್ಯ ನಿರ್ವಹಿಸಲು ಮತ್ತು ಸತ್ಸಂಗಳ ನಡುವೆ ವಿರಮಿಸಲು ಸಹಕಾರಿಯಾಯಿತು. ಜುಲೈ 23ರ ಬೆಳಿಗ್ಗೆ 11.30ಕ್ಕೆ ಉತ್ಸವದ ಕೇಂದ್ರವಸ್ತು–'ಪ್ರೇಮದಲ್ಲಿ ಶಿಸ್ತು' ವಿಷಯದ ಕುರಿತು ನಡೆದ ಕಾರ್ಯಕ್ರಮದಲ್ಲಿ ಸೋ. ಚಕ್ರಪಾಣಿಯವರು ಮೊದಲು ಇಂಗ್ಲಿಷ್‌ನಲ್ಲಿ, ನಂತರ ತಮಿಳಿನಲ್ಲಿ ಪ್ರೇರಣಾತ್ಮಕವಾಗಿ ಮಾತನಾಡಿದರು. ಅವರು ನಮ್ಮನ್ನು ಹಡಗಿನೊಂದಿಗೆ ಹೋಲಿಸುತ್ತಾ ಹೇಗೆ ಹಡಗೊಂದು ಕಸವನ್ನು ಒಟ್ಟುಗೂಡಿಸುತ್ತಿರುವಂತೆ ಅದರ ವೇಗ ನಿಧಾನವಾದಾಗ ಅದನ್ನು ಆಗಾಗ ನಿಲ್ಲಿಸಿ ಸ್ವಚ್ಛಗೊಳಿಸಬೇಕಾಗುವುದೋ ಅದೇ ತರಹ ನಾವು ಅಭ್ಯಾಸಿಗಳೂ ವರ್ಷಾವಧಿ ಒಟ್ಟುಗೂಡಿಸಿಕೊಂಡ ಸ್ಥೂಲತೆಯನ್ನು ನಿವಾರಿಸಿ ಗುರುಗಳು ಅವರನ್ನು ತಂತಮ್ಮ ಸ್ಥಾನಕ್ಕೆ ಕಳುಹಿಸಲು ಈ ಉತ್ಸವವು ಸದವಕಾಶ ಎಂದು ಹೇಳಿದರು. 23ರ ಸಂಜೆ ಅನೇಕ ಕೇಂದ್ರಗಳ ಅಭ್ಯಾಸಿಗಳಿಂದ ವಿವಿಧ ಹಾಡು ಮತ್ತು ನೃತ್ಯ ಪ್ರದರ್ಶನ ನಡೆಸಲಾಯಿತು.

## ಹುಟ್ಟುಹಬ್ಬದ ದಿನ


ಜುಲೈ 24ರಂದು ಗುರುಗಳು ಧ್ಯಾನಮಂದಿರಕ್ಕೆ ಹೋಗುವ ಮುನ್ನ ಅಲ್ಲಿನ ಮುಖ್ಯ ನೀರಿನ ಮೂಲವಾದ ಸರೋವರಕ್ಕೆ ಭೇಟಿ ನೀಡಿದರು. ಅವರು ಸರೋವರವು ತುಂಬಿರುವುದನ್ನು ನೋಡಿ "ಇಷ್ಟು ನೀರು ಸಾಕಾಗುವುದೋ ಅಥವಾ ಮಳೆಯ ಅಗತ್ಯವಿದೆಯೋ?" ಎಂದು ತಮಾಷೆ ಮಾಡಿದರು. ನಂತರ ಗುರುಗಳು ಪಿಟೀಲಿನಲ್ಲಿ ಹುಟ್ಟುಹಬ್ಬದ ಗೀತೆಯ ನಿನಾದ ಮತ್ತು ಅಭ್ಯಾಸಿಗಳ ಹಾಡಿನ ನಡುವೆ ಧ್ಯಾನಮಂದಿರವನ್ನು ಪ್ರವೇಶಿಸಿದರು. ಅವರು ಅಭ್ಯಾಸಿಗಳಿಂದ ತುಂಬಿ ತುಳುಕುತ್ತಿದ್ದ ಪ್ರಾಂಗಣವನ್ನು ನೋಡಿ, "ಸರೋವರದಂತೆಯೇ ಪ್ರಾಂಗಣವೂ ತುಂಬಿದೆ!" ಎಂದು ಉದ್ಗರಿಸಿದರು. ಉತ್ಸವದ ಮೂರು ದಿನಗಳಲ್ಲಿ ಗುರುಗಳು 28 ವಿವಾಹಗಳನ್ನು ಸಂಪನ್ನಗೊಳಿಸಿದರು. ಜುಲೈ 24ರಂದು ಸೋ. ರಂಜನಾ ಮೆಹ್ತಾ ಮತ್ತು ಸೋ. ಗುರ್‌ಪ್ರೀತ್‌ರವರು ಹಾಡಿದ ಸುಶ್ರಾವ್ಯ ಭಜನೆಗಳಿಗೆ ಹೃದಯ ತುಂಬಿಬಂದು ಅನೇಕರ ಕಣ್ಣಲ್ಲಿ ನೀರು ತರಿಸಿದವು. ನಂತರ ಗುರುಗಳು ಉಪನ್ಯಾಸ ನೀಡಿದರು.

ಸೋ. ಪಿ.ಆರ್. ಕೃಷ್ಣರವರು 24ರ ಸಂಜೆಯ ಸತ್ಸಂಗವನ್ನು ನಡೆಸಿಕೊಟ್ಟರು, ಸತ್ಸಂಗ ನಡೆಯುತ್ತಿದ್ದಂತೆಯೇ ಮೋಡಗಳು ಗುಡುಗುತ್ತಿದ್ದವು ಹಾಗೂ ಸತ್ಸಂಗ ಮುಗಿದೊಡನೆಯೇ ಮಳೆ ಧಾರಾಕಾರವಾಗಿ ಸುರಿಯಿತು. ನಂತರ ಸೋ. ಜಯಂತಿ ಕುಮರೇಸನ್‌ರ ವೀಣಾವಾದನವನ್ನು ಗುರುಗಳು ತಮ್ಮ ಕುಟೀರದಿಂದ ಸಿಸಿಟಿವಿಯಲ್ಲಿ ವೀಕ್ಷಿಸಿದರು. ಸಂಗೀತವು ಅತ್ಯದ್ಭುತವಾಗಿದ್ದುವೀಕ್ಷಕರನ್ನು ಎರಡು ಘಂಟೆಗಳ ಕಾಲ ಮೋಡಿ ಮಾಡಿತ್ತು.

ನಮಗೆಲ್ಲ ತಿಳಿದಿರುವಂತೆ, ಪೂಜ್ಯ ಗುರುಗಳಿಗೆ ಎಲ್ಲಾ ಅಭ್ಯಾಸಿಗಳನ್ನು ವ್ಯಕ್ತಿಗತವಾಗಿ ಭೇಟಿಯಾಗಲು ಸಾಧ್ಯವಾಗುವುದಿಲ್ಲ. ಆದರೂ ಸಹ







For Private Circulation Only





ಗುರುಗಳು ಅನೇಕ ಅಭ್ಯಾಸಿ ಗುಂಪುಗಳಿಗಾಗಿ ಸಮಯ ನೀಡಿದರು. ಅವರು ಆಫ್ರಿಕಾ, ನೇಪಾಳ, ಶ್ರೀಲಂಕಾ, ಯುಎಸ್ಎ, ಯೂರೋಪ್ ಇತರೆ ದೇಶಗಳ ಅಭ್ಯಾಸಿಗಳನ್ನು ಭೇಟಿ ಮಾಡಿದರು. ಅದರಲ್ಲಿ ಒಂದು ಸಭೆಯಲ್ಲಿ ಅವರು ಹೇಳಿದರು, ಅಭ್ಯಾಸಿಗಳು ತಮ್ಮ ಮೇಲೆ ಮತ್ತು ಇತರರ ಮೇಲೆ ಕೆಲಸ ಮಾಡಬೇಕು ಮತ್ತು ನಂತರ ಸಭೆಗಳನ್ನು ನಡೆಸಬೇಕು. ಆಗಲೇ ಸಭೆಗಳಿಗೆ ಅರ್ಥವಿರುತ್ತದೆ ಎಂದು ಹೇಳಿದ ಅವರು ಮುಂದಿನ ಬಾರಿ ಕೆಲಸ ಮಾಡಿ ನಂತರ ಭೇಟಿಯಾಗಿರಿ ಎಂದು ಆ ತಂಡಕ್ಕೆ ಉತ್ತೇಜನ ನೀಡಿದರು.

## ಸಮರ್ಥ ಮುಕ್ತಾಯ

ಜುಲೈ 25ರಂದು ಮಕ್ತಾಯ ಸತ್ಸಂಗವನ್ನು ಗುರುಗಳು ನಡೆಸಿಕೊಟ್ಟರು. ನಂತರ ಸೋ. ನಿಹಾರಿಕಾರವರು ಗುರುಗಳ ಸ್ತುತಿಯಲ್ಲಿ ಕೆಲವು ಹಿಂದಿ ಕವಿತೆಗಳನ್ನು ಓದಿದರು. ಅವು ಹೃದಯದಿಂದ ಹೊಮ್ಮಿದ ಶಬ್ದಗಳಾಗಿದ್ದು ಅಲ್ಲಿ ಸೇರಿದ ಪ್ರತೀ ಅಭ್ಯಾಸಿಯೂ ಕವಿತಾ ಪಠನದಿಂದ ಹೊರಸೂಸುತ್ತಿದ್ದ ಪ್ರೇಮವನ್ನು ಅನುಭವಿಸಬಹುದಿತ್ತು. ಸೋ. ಪಿ.ಆರ್. ಕೃಷ್ಣರವರು ಉತ್ಸವದ ವಿಷಯವಾದ 'ಪ್ರೇಮದಲ್ಲಿ ಶಿಸ್ತು' ಕುರಿತು ಮಾತನಾಡಿದರು. ಈ ಗುಣವನ್ನು ನಾವೆಲ್ಲರೂ ಉತ್ಸವದಲ್ಲಿ ಅನುಸರಿಸಿದ್ದು, ಅದು ಗುರುಗಳಿಗೆ ಸಂತಸ ತಂದದ್ದನ್ನು ಕಂಡು ನಾವು ಸಂತೋಷ ಪಡಬಹುದು ಎಂದು ಅವರು ಹೇಳಿದರು. ಅವರು ನಮ್ಮ ಜೀವನದ ಮೂರು ಪ್ರಮುಖ ಸಮಸ್ಯೆಗಳ ಬಗೆಯನ್ನು ವಿವರಿಸಿದರು– ಪೂರ್ವಾಗ್ರಹ, ನಿರೀಕ್ಷೆ ಮತ್ತು ನಿರ್ಣಯ. ಇವು ಮೂರೂ ಸಮಸ್ಯೆಗಳಿಗೆ ಕಾರಣ ನಮ್ಮ ಅಹಂ. ಗುರುಗಳು ಈಗಿನ ಸ್ಥಾನಕ್ಕೆ ತಲುಪುವಂತೆ ಮಾಡಿರುವ ಒಂದೇ ಗುಣವೆಂದರೆ ವಿಧೇಯತೆ ಎನ್ನುವ ಗುರುಗಳ ಉಕ್ತಿಯನ್ನು ಉಲ್ಲೇಖಿಸಿದರು. ಈ ಉಪನ್ಯಾಸದೊಂದಿಗೆ ಉತ್ಸವವು ಸಮಾಪ್ತಿಯಾದರೂ ಅಲ್ಲಿ ಪಡೆದ ಭಾವನೆಯು ನಮ್ಮ ಹೃದಯಗಳಲ್ಲೆಂದೂ ಶಾಶ್ವತ.












ಸಂಪುಟ 4, ವಿಶೇಷ ಸಂಚಿಕೆ ಆಗಸ್ಟ್ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

# ಗುರುಗಳ ಉಪನ್ಯಾಸದ ಸಾರ – ಜುಲೈ 24



.... “ ಅವರು (ಗುರ್‌ಪ್ರೀತ್) ಈಗಷ್ಟೇ ಹಾಡಿದರು, ಗುರುಗಳ ಕೃಪೆಯಿದ್ದಲ್ಲಿ ಪ್ರತೀ ಮುಂಜಾವೂ ಹೊಸತು. ನಮ್ಮ ಮುಂಜಾನೆಗಳು ಹೊಸತಾಗಿವೆಯೇ? ಅಥವಾ ಪ್ರತೀ ದಿನ ಬೆಳಿಗ್ಗೆ ನಾವು ಶೋಕಿಸುತ್ತಿದ್ದೇವೆಯೇ? ನಾನೇಕೆ ಎಚ್ಚೆತ್ತೆ? ಇಂದು ನಾನೇನು ಮಾಡುವವನಿದ್ದೇನೆ? ನಾನು ಅನೇಕ ವರ್ಷಗಳ, ಬಹುಶಃ ಅನೇಕ ಜನ್ಮಗಳ ಸಮಸ್ಯೆಗಳನ್ನೇ ಬಗೆಹರಿಸಿಲ್ಲ, ಇನ್ನು ಈ ದಿನ ಹೇಗೆ ಭಿನ್ನವಾಗಿದೆ? ಪುನಃ ನಾನು ಶೋಕಿಸುತ್ತೇನೆ ಮತ್ತು ದೇವರನ್ನು ಕರೆಯುತ್ತೇನೆ, 'ನನ್ನನ್ನು ಹೀಗೇಕೆ ಇಲ್ಲಿಟ್ಟಿರುವೆ?'

....ನಮ್ಮಲ್ಲಿ ಯಾರು ತಮಗಾಗಿ ಅಲ್ಲದೆ ಬೇರೆಯವರಿಗಾಗಿ ಏನನ್ನಾದರೂ ಮಾಡಿದ್ದೇವೆ? ನಾವು ಈಗಲೂ ನಮ್ಮ ಮನೆಯ ಕಸವನ್ನು ಬೀದಿಗೆಸೆಯುತ್ತಿಲ್ಲವೇ? ನಾವು ಈಗಲೂ ನಮ್ಮ ಮಕ್ಕಳನ್ನು ಶೌಚಕ್ಕೆ ರಸ್ತೆ ಬದಿಗೆ ಒಯ್ಯುತ್ತಿಲ್ಲವೇ? ನಾವು ಈಗಲೂ ಬೀದಿಯಲ್ಲಿ ಸಿಗರೇಟನ್ನು ಬಿಸಾಕುವುದು, ಕಾಗದ ವ್ಯರ್ಥ ಮಾಡುವುದು, ರಸ್ತೆಯಲ್ಲಿ ಉಗುಳುವುದು ಮಾಡುತ್ತಲೇ ಹಸಿರು ಪರಿಸರದ ಬಗ್ಗೆ ಮಾತನಾಡುತ್ತಿಲ್ಲವೇ? ನಾವು ಮರಗಳನ್ನು ಕಡಿಯುತ್ತಿಲ್ಲವೇ? ನಾವು ನಮ್ಮ ನದಿಗಳನ್ನು ಕಲುಷಿತಗೊಳಿಸುತ್ತಿಲ್ಲವೇ? ಪುರಾತನ ಕಾಲದ ವೇದಗಳ ಕೆಲ ಭಾಗಗಳಲ್ಲಿ ಹೇಳಲಾಗಿದೆ–ಒಳ್ಳೆಯ ಮನುಷ್ಯನು ಪರಿಸರಸ್ನೇಹಿಯಾಗಿರಬೇಕು, ಮರಗಳನ್ನು ಕಡಿಯಬಾರದು, ಮರಗಳನ್ನು ಪೂಜಿಸಬೇಕು. ಏಕೆಂದರೆ ಮರಗಳ ವಿನಃ ಆಮ್ಲಜನಕ ಸಿಗುವುದಿಲ್ಲ, ವಾತಾವರಣವು ಶುದ್ಧವಾಗುವುದಿಲ್ಲ. ಮರಗಳಿರುವುದು ಸೌದೆಗಾಗಿ ಅಲ್ಲ, ಮರಗಳಿರುವುದು ನಾವು ಪ್ರತೀ ಸಲ ಉಸಿರಾಟದಲ್ಲಿ ಇಂಗಾಲದ ಡೈ ಆಕ್ಸೈಡನ್ನು ಹೊರಬಿಟ್ಟು ಕಲುಷಿತಗೊಳಿಸುವ ವಾತಾವರಣವನ್ನು ಶುದ್ಧಿಗೊಳಿಸಲು. ನಾವು ಕಲುಷಿತಗೊಳಿಸುತ್ತೇವೆ ಆದರೆ ದೊಡ್ಡ ಮಾತನ್ನಾಡುತ್ತೇವೆ, ಮಾನವ ಕುಲವು ವಿಕಸನದ 'ಶಿಖರ'ದಲ್ಲಿದೆ ಎಂದು. ಆದರೆ ಅವನು ವಿಕಸನದ 'ಶಿಖರ'ದಲ್ಲಿಲ್ಲ, 'ಶಿಕಾರ್' (ಬೇಟೆ) ಆಗಿದ್ದಾನೆ.


.....ನಾನು ನಿಮ್ಮ ಗಮನ ಸೆಳೆಯಲು ಸೂಚಿಸಬಯಸುವುದೆಂದರೆ ಸದ್ಯದ ಪರಿಸ್ಥಿತಿಗೆ ನಾವೆಲ್ಲಾ ಜವಾಬ್ದಾರರು, ಈ ಭೂಮಿಯಲ್ಲಿ, ಗಂಗೆ ಹರಿಯುವ ನೆಲದಲ್ಲಿ, ಜಿಸ್ ದೇಶ್ ಮೆ ಗಂಗಾ ಬೆಹತಿ ಹೈ, ವೇದಗಳು ಹುಟ್ಟಿದ ಈ ನೆಲವು ಶ್ರೀಮಂತವಾಗಿದೆ ಎನ್ನುತ್ತೇವೆ. ನಾವೆಷ್ಟು ಹೇಳಿಕೊಳ್ಳುತ್ತೇವೆ. ಮಾನವ ಜೀವನದ ಆ ಅವಶ್ಯಕತೆಗಳು, ಕಟ್ಟಳೆಗಳನ್ನು ಪಾಲಿಸಿ ಆ ಪರಂಪರೆಯನ್ನು ಜೀವಂತವಾಗಿಡಲು ನಮ್ಮಕಡೆಯಿಂದ ಕೊಂಚವಾದರೂ ಪ್ರಯತ್ನಿಸುತ್ತಿದ್ದೇವೆಯೇ? ದಯೆ, ಕರುಣೆ, ಪ್ರೇಮ, ಹಂಚಿಕೊಳ್ಳುವಿಕೆ, ನಮಗಾಗಿಯಷ್ಟೇ ಅಲ್ಲದೆ ಇತರರಿಗಾಗಿಯೂ ಕೆಲಸ ಮಾಡುವುದು. ಆಧ್ಯಾತ್ಮ ಹೇಳುತ್ತದೆ, ನಿಮ್ಮನ್ನು ಮರೆಯಿರಿ. ನೀವು ಬೇರೆಯವರಿಗೇನು ಮಾಡುತ್ತೀರೋ ಅದು ಕೊನೆಗೆ ತಿರುಗಿ ನಿಮ್ಮಲ್ಲೇ ಬರುತ್ತದೆ, ಕೊನೆಗೆ ಎಂದರೆ ಮುಂದಿನ ಯುಗವೆಂದು ಅರ್ಥವಲ್ಲ. ಏಕೆಂದರೆ ಪ್ರಾಚೀನ ವಿಜ್ಞಾನ, ರಹಸ್ಯ ವಿದ್ಯೆಗಳು ಎಲ್ಲವೂ ಇದನ್ನೇ ಹೇಳುವುದು, ನೀವೇನು ಮಾಡುತ್ತೀರೋ, ನೀವೇನು ಆಲೋಚಿಸುತ್ತೀರೋ ಅದು ಪ್ರಪಂಚವನ್ನೆಲ್ಲ ಸುತ್ತಿ ಮತ್ತೆ ನಿಮ್ಮಲ್ಲಿಗೇ ಬರುತ್ತದೆ. ನೀವು ದ್ವೇಷಿಸಿ, ದ್ವೇಷ ನಿಮ್ಮಲ್ಲಿಗೆ ತಿರುಗಿ ಬರುತ್ತದೆ, ನೀವು ಪ್ರೇಮಿಸಿ, ನಿಮಗೆ ಪ್ರೇಮ ದೊರಕುತ್ತದೆ, ನೀವು ನೀಡಿ, ಕೊಟ್ಟದ್ದು ವಾಪಸ್ ನಿಮ್ಮಲ್ಲಿಗೇ ಬಂದು ಸೇರುತ್ತದೆ. ಆದರೆ ನಾವೇನು ಮಾಡುತ್ತಿರುವುದು? ತೆಗೆದುಕೋ, ತೆಗೆದುಕೋ, ತೆಗೆದುಕೋ.



...ಒಂದು ಗಾದೆಯಿದೆ, ಕಲ್ಲು ಕಲ್ಲೇ ಎಂದು. ನೀವದನ್ನು ಒದೆಯಿರಿ, ಎಸೆಯಿರಿ, ನೀವೇನನ್ನಾದರೂ ಮಾಡಿರಿ. ಆದರೆ ಅದನ್ನು ಗುಡಿಯಲ್ಲಿಡಿ, ಈಗ ನೀವದರ ಸೇವಕ. ನೀವು ಕಲ್ಲನ್ನುಇಡುವ ಸ್ಥಳ, ನಿಮ್ಮ ಹಣವನ್ನು, ನಿಮ್ಮ ಭಕ್ತಿಯನ್ನು ವಿನಿಯೋಗಿಸುವುದರ ಬಗೆಗೆ ಎಚ್ಚರದಿಂದಿರಿ. ಜಾಗ್ರತೆ, ಇಂದಿನ ಜಗತ್ತು ಸಾಕಷ್ಟು ಕೆಟ್ಟುಹೋಗಿದೆ, ನಾಳೆಯ ಜಗ, ಇನ್ನೈದು ವರ್ಷಗಳ ನಂತರ ಹೇಗಿರಬಹುದು? ನಿಮ್ಮ ಮಕ್ಕಳು ಐದು ವರ್ಷ ದೊಡ್ಡವರಾಗುತ್ತಾರೆ, ನಿಮ್ಮ ಮೊಮ್ಮಕ್ಕಳು ಐದು ವರ್ಷ ದೊಡ್ಡವರಾಗುತ್ತಾರೆ, ಮಕ್ಕಳು ತರುಣರಾಗುತ್ತಾರೆ, ನೀವು ವೃದ್ಧರಾಗುತ್ತೀರಿ ಮತ್ತು ನಿಮ್ಮಲ್ಲಿ ಇಂತಹ ಜಗತ್ತನ್ನು ನಾನೇ ತಯಾರು ಮಾಡಿರುವೆ, ಮಗೂ, ನೀನಾದರೂ ಹೀಗೆ ಮಾಡಬೇಡವೆಂದು ನಿಜ ಹೇಳಲು ಧೈರ್ಯವಿರುವುದಿಲ್ಲ. ನಾವು ಅದನ್ನು ಮಾಡೆವು. ಹಾಗಾಗಿ ಇಲ್ಲಿರುವ ನಮ್ಮ ಬಹಳಷ್ಟು ಜನದಲ್ಲಿ ಆಧ್ಯಾತ್ಮವು ಅಪ್ರಯೋಜಕವಾಗಿದೆ. ನಾವು ರಜೆಯಲ್ಲಿ ಬರುತ್ತೇವೆ, ಸಂಗೀತವನ್ನು ಆನಂದಿಸುತ್ತೇವೆ, ಉತ್ತಮ ಆಹಾರ ಆಸ್ವಾದಿಸುತ್ತೇವೆ. ನಮ್ಮಲ್ಲಿ ಎಷ್ಟು ಜನ ನಿಜವಾದ ಆಕಾಂಕ್ಷಿಗಳಿದ್ದಾರೆ?

...ಸತ್ಯವು ಕಹಿ ಔಷಧಿಯಿದ್ದಂತೆ, ನೀವದಕ್ಕೆ ಸಿಹಿಲೇಪನ ಮಾಡಿದರೂ ಪ್ರಯೋಜನವಿಲ್ಲ. ಅದಕ್ಕೆ ನೀವು ನಿಮ್ಮ ಒಳಗಿನಿಂದಲೇ ಹೊರಬರುವ ಅತಿ ಕಹಿ ಸತ್ಯಕ್ಕೆ ತಯಾರಾಗಿರಿ. ನೀವು ಸಂಜೆ ಶುದ್ಧೀಕರಣ ಮಾಡಿಕೊಳ್ಳುವಾಗ ನಿಮ್ಮನ್ನು ನೀವು ಗಮನಿಸುವಿರೇ? ನೀವು ಮಲಗುವ ಮುನ್ನ ಮಾಡುವ ಪ್ರಾರ್ಥನೆಯಲ್ಲಿ ಬಾಬೂಜಿ ಹೇಳಿರುವಂತೆ, 'ಅದೇ ತಪ್ಪನ್ನು ಪುನರಾವರ್ತಿಸದಂತೆ ದೃಢಸಂಕಲ್ಪ ಮಾಡಿ' ಎಂಬುದನ್ನು ಆಲೋಚಿಸುವಿರೇ? ನಾವು ಮಾಡುತ್ತೇವೆಯೇ ಅಥವಾ 'ಹೇ ನಾಥ! ನೀನೇ ಮಾನವ ಜೀವನದ ನಿಜವಾದ ಗುರಿ.....' ಇದು ನಗಾಡುವ ವಿಷಯವಲ್ಲ, ಹಾಗೆ ಕಂಡರೂ ಇದು ಬಹಳ ಗಂಭೀರ ವಿಚಾರ.

...ಪ್ರಕೃತಿ ಶಕ್ತಿ ಜಾಗೃತವಾದಾಗ ಪ್ರಾಣಿ–ಪಕ್ಷಿಗಳು, ಇರುವೆಗಳಿಗೂ ತಿಳಿಯುತ್ತದೆ, ನಮಗೆ ತಿಳಿಯುವುದಿಲ್ಲ. ನಾವು ಭೂಕಂಪ ಮಾಪಕದ ಮೇಲೆ, ಟಿವಿಯಲ್ಲಿನ ಬಿಸಿ ಸುದ್ದಿಗಳ ಮೇಲೆ ಅವಲಂಬಿತರಿರುತ್ತೇವೆ, ಅವುಗಳಲ್ಲಿ ಬಹಳಷ್ಟು ಸುಳ್ಳಾಗಿರುತ್ತದೆ. ಇಲ್ಲಿ (ಹೃದಯ) ಇರುವುದೇನನ್ನು ನೀವು ನೋಡುತ್ತಿಲ್ಲ? ಇದೇನಾದರೂ ವಿಪತ್ತಿನ ಎಚ್ಚರಿಕೆ ನೀಡುತ್ತದೆಯೇ? ನೀವು ಭಯಭೀತರಾದಾಗ, ನೀವು ಹಾದಿ ತಪ್ಪಿ ನಡೆದಾಗ ಸದಾ ಇಲ್ಲೇ ನೋಡಿ. ಬಾಬೂಜಿ ಮಹಾರಾಜರು ಹೇಳಿದ್ದಾರೆ, 'ಇದನ್ನು (ಬುದ್ಧಿ) ನಂಬಬೇಡ. ಅದು ಕೇವಲ ವರ್ತಮಾನವನ್ನು ಹೇಳುವ ಆಲೋಚನಾ ಯಂತ್ರವಷ್ಟೇ, ಸರಿ–ತಪ್ಪುಗಳನ್ನು ಹೇಳಲಾರದು. ನಿಮಗೆ ಸಂಶಯವಿದ್ದಾಗ ಹೃದಯವನ್ನು ಆಲಿಸಿ.' ಇಂದು ನಿಮ್ಮೆಲ್ಲರನ್ನೂ ಅವರು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

# ಹೊಸ ಪ್ರಕಟನೆಗಳು



ಗುರುಗಳು ಬಿಡುಗಡೆ ಮಾಡಿದ ಅನೇಕ ಪುಸ್ತಕಗಳು ಮತ್ತು ಸಿಡಿಗಳಲ್ಲಿ ಕೆಲವನ್ನು ಈ ಕೆಳಗೆ ತೋರಿಸಲಾಗಿದೆ.

**ಟೇಲ್ಸ್ ಆಫ್ ವಂಡರ್–1**
ತಮಿಳು, ತೆಲುಗು, ಹಿಂದಿ


**ಕಂಪ್ಲೀಟ್ ವರ್ಕ್ಸ್ ಆಫ್ ರಾಮಚಂದ್ರ**
ಸಂ1 –ಹಿಂದಿ

**ವೈ ಸ್ಪಿರಿಚ್ಯುವಾಲಿಟಿ**
ಆಂಗ್ಲ, ಹಿಂದಿ, ತಮಿಳು, ತೆಲುಗು, ಗುಜರಾತಿ, ಕನ್ನಡ, ತೆಲುಗು, ಮರಾಠಿ, ನೇಪಾಳಿ, ಜರ್ಮನ್, ಇಟಾಲಿಯನ್, ಪೋರ್ಚುಗೀಸ್, ಸ್ಪ್ಯಾನಿಶ್


**ಡೌನ್ ಮೆಮೊರಿ ಲೇನ್**
ಎರಡನೇ ಆವೃತ್ತಿ




**ಅಂಡರ್‌ಸ್ಟ್ಯಾಂಡಿಂಗ್ ಸ್ಪಿರಿಚ್ಯುವಾಲಿಟಿ**
(5 ಡಿವಿಡಿಗಳ ಗುಂಪು)




**ಪ್ರಶಿಕ್ಷಕರ ಡಿವಿಡಿ ಸಂಪುಟ 2**
(ಕಾರ್ಪಸ್ ರಹಿತ)





**ಇನ್ನರ್ ರಿಫ್ಲೆಕ್ಷನ್ಸ್ ಸಂಪುಟ 1**
ಸತ್ಸಂಗದ ನಂತರದ ಪರ್ಯಾಲೋಚನೆಗಾಗಿ ಉಪನ್ಯಾಸಗಳು




**ಗುರು ಮತ್ತು ಗುರಿ**
ತಮಿಳು, ತೆಲುಗು, ಕನ್ನಡ, ಮಲಯಾಳಂ, ಮರಾಠಿ, ಗುಜರಾತಿ




**ರಿಲಿಜನ್ ಅಂಡ್ ಸ್ಪಿರಿಚ್ಯುವಾಲಿಟಿ**
ತಮಿಳು





**ಯುತ್ ಸಂ–1**
ಇಟಾಲಿಯನ್




**ರಿಯಾಲಿಟಿ ಅಟ್ ಡಾನ್**
ಮಲಯಾಳಂ





**ಹಾರ್ಟ್ ಸ್ಪೀಕ್ 2009**
ಸ್ಪ್ಯಾನಿಶ್




**ಹಾರ್ಟ್ ಸ್ಪೀಕ್ 2007**
ಹಿಂದಿ




**ಹಾರ್ಟ್ ಸ್ಪೀಕ್ 2002**
ಸಂಪುಟ 1, ಆಂಗ್ಲ




**ಟೇಲ್ಸ್ ಆಫ್ ವಂಡರ್–2**
ಆಂಗ್ಲ